ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೆರಡನೆಯ ಅಧಿವೇಶನ

ಮಂಗಳವಾರ, ದಿನಾಂಕ : 08 ನೇ ಡಿಸೆಂಬರ್, 2020

ಸಾರ್ವಜನಿಕ ಉದ್ಯಮಗಳಲ್ಲಿ ಅನುಕಂಪ ಆಧಾರದ ಹುದ್ದೆಗಳ ನವೀಕರಣದ ಬಗ್ಗೆ

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-

105 (180) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿರುವ ಸಾರ್ವಜನಿಕ ಉದ್ದಿಮೆಗಳ ಸಂಖ್ಯೆ ಎಷ್ಟು; ಅವು ಯಾವುವು ; ಅವುಗಳನ್ನು ಯಾವ ರೀತಿ ವರ್ಗೀಕರಿಸಲಾಗಿದೆ ; (ಆಡಳಿತ ಇಲಾಖೆವಾರು ವಿವರವಾದ ಮಾಹಿತಿ ಒದಗಿಸುವುದು)

(ಆ) ಸದರಿ ಸಾರ್ವಜನಿಕ ಉದ್ದಿಮೆಗಳು ದಿನಾಂಕ : 01-04-2001 ರಿಂದ ಇಲ್ಲಿಯವರೆಗೂ ಅಂದರೆ 20 ವರ್ಷಗಳ ಕಾಲ ಅನುಕಂಪ ಆಧಾರಿತ ಹುದ್ದೆಗಳನ್ನು ನೇಮಕ ಮಾಡುವ ಸಂಬಂಧ ನಿರ್ಬಂಧ ವಿಧಿಸಿರುವುದು ಸರಿಯೇ ; ಈ ರೀತಿ ನಿರ್ಬಂಧಗಳನ್ನು ವಿಧಿಸಲು ಕಾರಣಗಳೇನು ; (ವಿವರವಾದ ಮಾಹಿತಿ ಒದಗಿಸುವುದು)

(ಇ) ಸದರಿ ದಿನಾಂಕದವರೆಗೆ ಅನುಕಂಪ ಆಧಾರದ ಮೇಲೆ ಕೆಲಸ ಕೋರಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು ; (ಮೃತ ನೌಕರನ ಹೆಸರು, ಅರ್ಜಿದಾರರ ಹೆಸರು, ವಿಳಾಸ ಹಾಗೂ ಅರ್ಜಿ ಸಲ್ಲಿಸಿದ ದಿನಾಂಕದೊಂದಿಗೆ ನಿಗಮವಾರು ವಿವರವಾದ ಮಾಹಿತಿ ಕೊಡುವುದು)

(ಈ) ಯಾವ ಕಾಲಮಿತಿಯೊಳಗೆ ಈ ನಿರ್ಬಂಧವನ್ನು ಸರ್ಕಾರ ರದ್ದುಗೊಳಿಸಿ ನೊಂದ ಕುಟುಂಬಗಳಿಗೆ ನ್ಯಾಯ ದೊರಕಿಸುವುದು;

(ಉ) ಯಾವ ಇಲಾಖೆಗಳಲ್ಲಿಯೂ ಇಲ್ಲದ ನಿರ್ಬಂಧ ಸಾರ್ವಜನಿಕ ಉದ್ದಿಮೆಗಳ ಇಲಾಖೆಯಲ್ಲಿ ಇರುವುದು ನ್ಯಾಯವೇ ?